ಅ. ಟಿ.ನರಸೀಪುರ ವಿಧಾನ ಸಭಾ ಕ್ಷೇತ್ರದಲ್ಲಿ ಅನೇಕ ಗ್ರಾಮಗಳಲ್ಲಿ ಸ್ಮಶಾನಗಳಿಲ್ಲದೆ ಗ್ರಾಮಸ್ಥರಿಗೆ ತುಂಬ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಸಮಸ್ಯೆ ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ. ಬಂದಿರುವುದಿಲ್ಲ.

ಆ. ಸಮಸ್ಯೆ ಇರುವ ಗ್ರಾಮಗಳಲ್ಲಿ ಸರ್ಕಾರಿ ಜಮೀನು ಲಭ್ಯವಿದ್ದಲ್ಲಿ ಕಾಯ್ದಿರಿಸಲು ಹಾಗೂ ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನನ್ನು ಖರೀದಿಸಿ ಅಥವಾ ಭೂಸ್ವಾಧೀನ ಪಡಿಸಿಕೊಂಡು ಸ್ಮಶಾನಕ್ಕಾಗಿ ಸೌಲಭ್ಯ ಕಲ್ಪಿಸಲು ಸರ್ಕಾರಿ ಆದೇಶ ಸಂಖ್ಯೆ ಕಂಇ 185 ಭೂಸ್ವಾಮ್ಯ 92 ದಿ:20- 10-95ರಲ್ಲಿ ಅವಕಾಶ ಕಲ್ಪಿಸಲಾಗಿದೆ.

ಹರಿಜನರ ಗಿರಿಜನರ ಸಾಗುವಳಿ ಭೂಮಿ ಕೋರಿ ಬಂದಿರುವ ಅರ್ಜಿಗಳ ಬಗ್ಗೆ.

2487(2861)

ಡಾ: ಭಾರತಿ ಶಂಕರ(ಟಿ.ನರಸೀಪುರ):ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ ವಿಧಾನ ಸಭಾ ಕ್ಷೇತ್ರದಲ್ಲಿ ಹರಿಜನರು ಗಿರಿಜನರು ಸಾಗುವಳಿಭೂಮಿ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು? ಗ್ರಾಮಾಂತರ ಸಹಿತ ವಿವರ ನೀಡುವುದು)

ಆ) ಎಷ್ಟು ಫಲಾನುಭವಿಗಳಿಗೆ ಭೂಮಿ ವಿತರಿಸಲಾಗಿದೆ?

ಇ) ವಿತರಿಸಲು ಬಾಕಿ ಉಳಿದ ಭೂಮಿ ಎಷ್ಟು ಫಲಾನುಭವಿಗಳ ಸಂಖ್ಯೆ ಎಷ್ಟು? (ಸರ್ವೆ ನಂಬರ್ ಸಹಿತ ತಿಳಿಸಿ)

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) 1219 ಅರ್ಜಿಗಳನ್ನು ಸ್ವೀಕರಿಸಲಾಗಿದೆ. (ಗ್ರಾಮವಾರು ವಿವರಗಳನ್ನು ನಂತರ ಒದಗಿಸಲಾಗುವುದು)

ಆ) 138 ಫಲಾನುಭವಿಗಳಿಗೆ ಭೂಮಿ ವಿತರಿಸಲಾಗಿದೆ.

ಇ) ಹಂಚಿಕೆಗೆ ಬಾಕಿ ಇರುವ ಭೂಮಿ 1,437.34 ಎಕರೆ.

ಫಲಾನುಭವಿಗಳ ಸಂಖ್ಯೆ:658 (ಸರ್ವೆ ನಂಬರ್‌ವಾರು ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಿ ಕೊಡಲಾಗುವುದು)

ಟಿ.ನರಸೀಪುರದಲ್ಲಿ ಇಂದಿರಾ ಆವಾಸ್ ಯೋಜನೆಯಲ್ಲಿ ಮಂಜೂರಾಗಿರುವ ಮನೆಗಳು.

2488(2862)

ಡಾ: ಭಾರತಿ ಶಂಕರ್(ಟಿ.ನರಸೀಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ ಟೌನ್ ಪಂಚಾಯತಿಗೆ 1996-97 ರಿಂದ 99-2000ರದವರೆಗೆ ಆಶ್ರಯ ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಗಳನ್ನು ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು?

ಆ) ಎಷ್ಟು ಮನೆಗಳನ್ನು ವಿತರಿಸಲಾಗಿದೆ?

ಇ) ವಿತರಿಸದೇ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು? ವಿತರಣೆ ಮಾಡದಿರುವುದಕ್ಕೆ ಕಾರಣಗಳೇನು? ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಟಿ.ನರಸೀಪುರ ವಿಧಾನ ಸಭಾ ಕ್ಷೇತ್ರಕ್ಕೆ 98-99 ಮತ್ತು 99-2000ರ ಸಾಲಿನಲ್ಲಿ ಮಂಜೂರಾಗಿರುವ ಆಶ್ರಯ ಅಂಬೇಡ್ಕರ್ ಇಂದಿರಾ ಆವಾಜ್ ಯೋಜನೆ ಮನೆಗಳ ಸಂಖ್ಯೆ ಎಷ್ಟು?

ಉ) ವಿತರಣೆಯಾಗಿರುವ ಮನೆಗಳ ಸಂಖ್ಯೆ ಎಷ್ಟು? ವಿತರಣೆಯಾಗದಿರುವ ಮನೆಗಳ ಸಂಖ್ಯೆ ಎಷ್ಟು? (ವಾರ್ಷಿಕ ಮತ್ತು ಯೋಜನಾವಾರು ಸಂಖ್ಯೆ ನೀಡಿ)

ಊ) ಟಿ.ನರಸೀಪುರ ಪಟ್ಟಣದ ಯಾವ ಯಾವ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಸರ್ಕಾರ ಘೋಷಿಸಿದೆ, ಇನ್ನು ಘೋಷಣೆಯಾಗದ ಪ್ರದೇಶಗಳು ಯಾವುವು?

ಋ) ಈ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ? ಕೊಳಚೆ ಪ್ರದೇಶಗಳಲ್ಲಿ ಈವರೆಗೆ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳೇನು? ಈ ಕಾರ್ಯಗಳಿಗೆ ಈವರಗೆ ವ್ಯಯ ಮಾಡಿರುವ ಮೊತ್ತವೆಷ್ಟು? (1998-99 ಮತ್ತು 00-2000) ಕೊಳಚೆ